**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ 8, ಫ್ರಾ.ಸಾಃ 05**

| | |
|---|---|
| ಸಾಕ್ಷಿದಾರನ ಹೆಸರು | ನಾರಾಯಣ ಗೌಡ |
| ತಂದೆಯ ಹೆಸರು | ಗೋಯ್ದು ಗೌಡ |
| ವಯಸ್ಸು | 54 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಅಗ್ರಹಾರ, ಮಣಗದ್ದೆ |

**ಸಾಕ್ಷಿಯನ್ನು ದಿನಾಂಕಃ 19-05-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನನ್ನ ವಾಸದ ಮನೆಯು ಮಣಗದ್ದೆಯಲ್ಲಿ ಇದ್ದು ಅಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ವಾಸ ಮಾಡುತ್ತಿದ್ದೇವೆ.

ದಿನಾಂಕ 25-03-2019 ರಂದು ನನ್ನ ಮಗನು ಮೊದಲು ಚಾಲಕ ಕೆಲಸಕ್ಕೆ ಹೋಗಿರುತ್ತಾನೆ. ನಂತರ ನನ್ನ ಹೆಂಡತಿ ಕೂಲಿ ಕೆಲಸಕ್ಕೆ ಹೋಗಿರುತ್ತಾಳೆ. ನಂತರ ನಾನು ಸುಮಾರು 11-00 ರ ಸಮಯಕ್ಕೆ ಕೆಲಸಕ್ಕೆ ಹೊರಟಿದ್ದು ಹೋಗುವ ಮೊದಲು ಮನೆಯ ಮುಂದಿನ ಬಾಗಿಲಿಗೆ ಬೀಗವನ್ನು ಹಾಕಿ ಹೋಗಿದ್ದೆ.

ನಾನು ಸಾಯಂಕಾಲ 07-30 ರ ಸಮಯಕ್ಕೆ ಮನೆಗೆ ಬಂದಾಗ ನನ್ನ ಮಗ ಮೊದಲೇ ಬಂದಿದ್ದು, ದೇವರ ಕೋಣೆಯಲ್ಲಿ ಇದ್ದ ಪೆಟ್ಟಿಗೆ ಇಲ್ಲ ಎಂದು ಹೇಳಿರುತ್ತಾನೆ. ಮನೆಯಲ್ಲಿ ಹುಡುಕಿದರೂ ಸಹ ಸದರಿ ಪೆಟ್ಟಿಗೆ ಸಿಕ್ಕಿರುವುದಿಲ್ಲ. ಅದರಲ್ಲಿ ರೂ.80,000-00 ನಗದು ಮತ್ತು ಕಿವಿಯೋಲೆ ಇಟ್ಟಿದ್ದೆವು. ನಂತರ ಪೋಲಿಸರು ಬಂದಿದ್ದು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

ದಿನಾಂಕ 04-08-2020 ರಂದು ಪೋಲಿಸರು ಇಬ್ಬರು ಕಳ್ಳರನ್ನು ನಮ್ಮ ಮನೆಯ ಬಳಿ ಕರೆತಂದು ಇವರೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ಕಳ್ಳರು ಎಂದು ಪೋಲಿಸರು ಹೇಳಿದರು. ನಾನು ಕರೆತಂದಿದ್ದ ವ್ಯಕ್ತಿಗಳನ್ನು ಕೇಳಲಾಗಿ ಅವರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡು ಕಳ್ಳತನ ಮಾಡಿದ ರೀತಿಯನ್ನು ತೋರಿಸಿದರು. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ಗುರುತಿಸಿದ್ದು, ಗೈರು ಹಾಜರಿರುವ 2 ನೇ ಆರೋಪಿಯ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ಕಿವಿಯೋಲೆಯನ್ನು ತೋರಿಸುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕಿವಿಯೋಲೆಯನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದ್ದು ಅದರ ಗುರುತಿಸುವಿಕೆಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಹಣ ಮತ್ತು ಕಿವಿಯೋಲೆ ಇದ್ದ ಪೆಟ್ಟಿಗೆಯನ್ನು ದೇವರ ಕೋಣೆಯಲ್ಲಿ ನನ್ನ ಹೆಂಡತಿ ಇಟ್ಟಿದ್ದಳು. ನನ್ನ ಮಗ ಆಧಾರ ಕಾರ್ಡ ಸಲುವಾಗಿ ಮಧ್ಯಾಹ್ನ ಮನೆಗೆ ಬಂದಿದ್ದ. ತನ್ನ ಬಳಿ ಇದ್ದ ಮತ್ತೊಂದು ಚಾವಿಯಿಂದ ಆತ ಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆದಿದ್ದ. ಹಣ ಮತ್ತು ಕಿವಿಯೋಲೆ ಇದ್ದ ಪೆಟ್ಟಿಗೆಯನ್ನು ಒಂದು ದೊಡ್ಡ ಟ್ರಂಕಿನಲ್ಲಿ ನನ್ನ ಹೆಂಡತಿ ಹಾಕಿದ್ದಳು. ಟ್ರಂಕಿಗೆ ಬೀಗವನ್ನು ಹಾಕಲಾಗಿತ್ತು. ಕಳ್ಳರು ಸದರಿ ಟ್ರಂಕನ್ನೇ ಎತ್ತಿಕೊಂಡು ಹೋಗಿದ್ದರು. ಟ್ರಂಕಿನ ಅಗಲ ಎರಡುವರೆ ಅಡಿ, ಎತ್ತರ ಮತ್ತು ದಪ್ಪ ಒಂದುವರೆ ಅಡಿ ಇತ್ತು. ಸದರಿ ಟ್ರಂಕನ್ನು ಪೋಲಿಸರು ನಮಗೆ ತೋರಿಸಿರುವುದಿಲ್ಲ.

ದಿನಾಂಕ 04-08-2020 ರಂದು ಪೋಲಿಸರು ಬರುವ ಪೂರ್ವದಲ್ಲಿ ನಮಗೆ ತಿಳಿಸಿರುವುದಿಲ್ಲ. ಸದರಿ ದಿನದಂದು ಪೋಲಿಸರು ಬೆಳಿಗ್ಗೆ 11-30 ರ ಸಮಯಕ್ಕೆ ಬಂದಿದ್ದು ಆಗ ಮನೆಯಲ್ಲಿ ನಾನೊಬ್ಬನೇ ಇದ್ದೆ. ಮರುದಿನ ಠಾಣೆಗೆ ನಾನೊಬ್ಬನೇ ಮಧ್ಯಾಹ್ನ 01-00 ರ ಸಮಯಕ್ಕೆ ಹೋಗಿದ್ದೆ.

ದಿನಾಂಕ 05-08-2020 ರಂದು ನಾನು ಠಾಣೆಯಲ್ಲಿ ಆರೋಪಿಗಳನ್ನು ನೋಡಿರುವುದಿಲ್ಲ. ಸದರಿ ದಿನದಂದು ಪೋಲಿಸರು ನನ್ನ ಮುಂದೆ ಆಭರಣಗಳನ್ನು ತೂಕ ಮಾಡಿಸಿರುವುದಿಲ್ಲ ಮತ್ತು ಮೌಲ್ಯಮಾಪನ ಮಾಡಿಸಿರುವುದಿಲ್ಲ.

ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆಯ ಬಳಿ ಕರೆತಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಆದ ಕಳ್ಳತನಕ್ಕೆ ಮತ್ತು ಆರೋಪಿಗಳಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**